# ಕರ್ನಾಟಕ ವಿಧಾನಸಭೆ
# KARNATAKA LEGISLATIVE ASSEMBLY

ಸೋಮವಾರ, ೧೭ನೇ ಏಪ್ರಿಲ್ ೧೯೯೫ ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಂಡಿತು.

**Monday, 17th April 1995 Sayana Sowra chithra 16 (S.E.)**

**ಅಧ್ಯಕ್ಷರು ಶ್ರೀ ರಮೇಶ್‌ಕುಮಾರ್ ಅವರು ಪೀಠವನ್ನು ಅಲಂಕರಿಸಿದ್ದರು.**

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

**ವಿಷಯ : ( 1 ) ಕಿಡ್ನಿ ಟ್ರಾನ್ಸ್‌ಪ್ಲಾಂಟೇಷನ್‌ಗೆ ಸರ್ಕಾರದ ಅನುಮತಿ.**

ಶ್ರೀ ಹೆಚ್.ಎನ್ ನಂಜೇಗೌಡ (ಬಸವನಗುಡಿ) : ಮಾನ್ಯ ಅಧ್ಯಕ್ಷರೆ, ಇದೊಂದು ಮಾನವೀಯತೆಗೆ ಸಂಬಂಧಪಟ್ಟ ಸಮಸ್ಯೆ. ಅದು ಎಂದರೆ ಕಿಡ್ನಿ ಟ್ರಾನ್ಸ್‌ಪ್ಲಾಂಟೇಷನ್‌ಗೆ ಸಂಬಂಧಪಟ್ಟ ವಿಷಯ ನನ್ನ ಕ್ಷೇತ್ರದಲ್ಲಿ ಒಬ್ಬ ಹೆಂಗಸು 70 ಸಾರಿ ಡಯಾಲಿಸಿಸ್‌ನ್ನು ಮಾಡಿಸಿಕೊಂಡಿದ್ದಾಳೆ. ಈಗ ಆಕೆಗೆ ಕಿಡ್ನಿಯನ್ನು ದಾನ ಕೊಡುವವರು ಮುಂದೆ ಬಂದಿದ್ದಾರೆ. ಆದರೆ ಸರ್ಕಾರದ ಅನುಮತಿ ಇಲ್ಲದೆ ನಾವು ಈ ಕೆಲಸವನ್ನು ಮಾಡುವುದಿಲ್ಲವೆಂದು ಡಾಕ್ಟರ್‌ಗಳು ಹೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರಿಂದ ಹಿಡಿದು ಎಲ್ಲರಿಗೂ ಅರ್ಜಿಗಳನ್ನು ಕೊಟ್ಟು ಅನುಮತಿ ನೀಡಬೇಕೆಂದು ಕೇಳಿಕೊಂಡು ಅಲೆದಾಡಿದ್ದಾರೆ. ನಾನು ಇಲ್ಲಿ ವಾದ ಮಾಡುವುದಕ್ಕೆ ನಿಂತಿಲ್ಲ. ಈ ಒಂದು ಮನವಿಯನ್ನು ತಮ್ಮ ಮೂಲಕ ಮಾನ್ಯ ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಕೇವಲ ಇದೊಂದು ಕೇಸ್ ಮಾತ್ರ ಅಲ್ಲ. ಇಂಥಾದ್ದು ನೂರಾರು ಕೇಸುಗಳಿವೆ. ತಾವು ಇದಕ್ಕೆ ಅನುಮತಿಯನ್ನು ಕೊಡದೇ ಹೋದರೆ .....

ಶ್ರೀ ಹೆಚ್.ಡಿ. ದೇವೇಗೌಡ : ಯಾರೋ ಒಬ್ಬ ಹೆಂಗಸಿಗೆ 70 ಸಾರಿ ಡಯಾಲಿಸಿಸ್ ಆಗಿದೆ, ಈಗ ಅವರಿಗೆ ಕಿಡ್ನಿ ಟ್ರಾನ್ಸ್‌ಪ್ಲಾಂಟೇಂಷನ್‌ಗೆ ಅನುಮತಿ ನೀಡಲೇಬೇಕೆಂದು ಮಾನ್ಯ ವಿರೋಧಿಪಕ್ಷದ ನಾಯಕರು ಹಾಗೂ ಮಾನ್ಯ ಹಿರಿಯ

ಸದಸ್ಯರಾದ ನಂಜೇಗೌಡರು ಹೇಳುತ್ತಿದ್ದಾರೆ. ನನಗೆ ಆ ಹೆಂಗಸು ಜನತಾ ಸಂದರ್ಶನ ಸಮಯದಲ್ಲಿ ಬಂದು ಅರ್ಜಿಯನ್ನು ಕೊಟ್ಟಾಗ ಕೂಡಲೇ ನಾನು ಅದೇ ದಿವಸವೇ ಆರ್ಡರ್ ಮಾಡಿದ್ದೇನೆ. ಸರ್ಕಾರ ಇಂಥ ಕೇಸುಗಳನ್ನು ತಕ್ಷಣ ಮಾಡುವ ಸಲುವಾಗಿ 3 ಜನ ಎಕ್ಸ್‌ಪರ್ಟ್ಸ್ ಕಮಿಟಿಯನ್ನು ನೇಮಕ ಮಾಡಿದ್ದು ಇಂಥ ಕೇಸುಗಳು ಬಂದಕೂಡಲೇ ಅವತ್ತೇ ಅದೇ ಸ್ಥಳದಲ್ಲೇ ಕುಳಿತು ತೀರ್ಮಾನ ತೆಗೆದುಕೊಂಡು ಅನುಮತಿ ನೀಡಬೇಕೆಂದು ಹೇಳಿದ್ದೇವೆ.

ಶ್ರೀ ಹೆಚ್.ಎನ್. ನಂಜೇಗೌಡ : ಈ ಆರ್ಡರ್ ಆದಮೇಲೆ ಆ ಹೆಂಗಸು ಹೆಲ್ತ್ ಸೆಕ್ರೆಟರಿಯವರನ್ನು ಭೇಟಿಮಾಡಿದ್ದರಂತೆ. ಸರ್ಕಾರದವರು ಕೂಡಲೇ ತೀರ್ಮಾನವನ್ನು ಅಂತಿಮವಾಗಿ ತೆಗೆದುಕೊಳ್ಳದೇ ಹೋದರೆ ರೋಗಿಗಳು ಸಾಯುತ್ತಾರೆ.

ಶ್ರೀ ಹೆಚ್.ಡಿ. ದೇವೇಗೌಡ : ಆಯಾಯ ದಿವಸವೇ ಈ ಕೇಸುಗಳನ್ನು ಕ್ಲಿಯರ್ ಮಾಡಬೇಕೆಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಆದರೆ ಇದು ಆಗಲಿಲ್ಲವಲ್ಲಾ !

ಶ್ರೀ ಹೆಚ್.ಡಿ. ದೇವೇಗೌಡ : ಅದು ಆಗಿಲ್ಲದಿದ್ದರೆ ನಾನು ನೋಡುತ್ತೇನೆ. ಏಕೆಂದರೆ ಮೊನ್ನೆ ದಿವಸ ನಾನು ಆರ್ಡರ್ ಮಾಡಿದ್ದೇನೆ. ನಿನ್ನೆ ಮೊನ್ನೆ ರಜೆ ಇತ್ತು. ಈಗ ನೀವು ಸರ್ಕಾರದ ಗಮನಕ್ಕೆ ತಂದಿದ್ದೀರಿ ಸಂತೋಷ. ಆದರೆ ಇದರ ಬಗ್ಗೆ ಇನ್ನೊಮ್ಮೆ ಕ್ರಮ ತೆಗೆದುಕೊಳ್ಳುವಂತೆ ತಿಳಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಸದಸ್ಯರು ಇದೊಂದು ಕೇಸನ್ನು ಸ್ಪೆಸಿಫಿಕ್ ಆಗಿ ಇಲ್ಲಿ ರೆಫರ್ ಮಾಡಿದರು. ಆದರೆ ಇಂಥ ಹತ್ತಾರು ಜನರು ಈ ರೀತಿ ಡಯಾಲಿಸಿಸ್‌ನಿಂದ ನರಳುತ್ತಿರುವವರು ಇದ್ದಾರೆ. ಕಿಡ್ನಿಯನ್ನು ಕೊಡುವವರೂ ಇದ್ದಾಗ ಈ ಕೇಸು ಕಮಿಟಿಯ ಮುಂದೆ ಏತಕ್ಕೆ ಹೊಗಬೇಕು ?

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ನಂಜೇಗೌಡರು ಹೇಳಿದ್ದರಿಂದ ನಾನು ಹೇಳುತ್ತಿದ್ದೇನೆ. ಇನ್ನು ಮುಂದೆ ಇಂಥ ಸಮಸ್ಯೆ? ಬರಬಾರದೆಂಬ ಉದ್ದೇಶದಿಂದ 3 ಜನರ ಎಕ್ಸ್‌ಪರ್ಟ್ಸ್ ಕಮಿಟಿಯನ್ನು ಮಾಡಿ ಆಯಾಯ ದಿವಸ ಎಷ್ಟೆಷ್ಟು ಕೇಸುಗಳು ಇಂಥವು ಬರುತ್ತವೆ ಅವೆಲ್ಲವನ್ನೂ ಆಯಾಯ ದಿವಸವೇ ಕ್ಲಿಯರ್ ಮಾಡಬೇಕೆಂದು ಹೇಳಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಯಾರು ಎಕ್ಸ್‌ಪರ್ಟ್ಸ್ ಡಾಕ್ಟರ್‌ಗಳಿದ್ದಾರೆ ಅವರೂ ಕೂಡ ಇದನ್ನು ತೆಗೆದುಕೊಂಡರೆ ಇದು ನಮ್ಮ ಮೈಮೇಲೆ ಬರುತ್ತದೆಂದು ಹೆದರಿದ್ದಾರೆ. ಅವರೂ ಕೂಡ ಇದಕ್ಕೆ ಕೈ ಹಾಕುವುದಕ್ಕೆ ಮುಂದೆ ಬರುತ್ತಿಲ್ಲ. ಈ ರೀತಿ ಡಯಾಲಿಸಿಸ್‌ನಿಂದ ನರಳುತ್ತಿರುವವರು ಸಾಯುವ ಸ್ಥಿತಿಯಲ್ಲಿದ್ದಾರೆ. ಅವರು ಉಳಿಯುವುದೇ ಕಷ್ಟವಾಗಿದೆ. ಅವತ್ತಿನದನ್ನು ಅವತ್ತವತ್ತೇ ಡಿಸ್‌ಪೋಸ್ ಮಾಡುವುದಕ್ಕಾದರೂ ಡೈರೆಕ್ಷನ್ ಕೊಡಿ.

ಅಧ್ಯಕ್ಷರು : ಅದನ್ನೇ ಹೇಳಿದರಲ್ಲಾ.